

ಕಾಮಕೂಟದಲ್ಲಿ ಬಾಲ್ಯದ ಮರುಕಳಿಕೆ, ಹಾಗೂ ಚೈತನ್ಯಭರಿತ ಮರುಬದುಕಿಗೆ ಯತ್ನ ನಡೆಯುತ್ತದೆ.

ಡಾ.ವಿನೋದ ಛೆಬ್ಬಿ

# 294: ಹೊಸ ದಾರಿ - 34

ಅನ್ಯೋನ್ಯತೆಗೂ ಕಾಮಕ್ರಿಯೆಗೂ ಇರುವ ನಂಟಿನ ಬಗೆಗೆ ಹೋದಸಲ ಬರೆದಿದ್ದೆ. ಅನ್ಯೋನ್ಯತೆಯ ವಿಷಯದಲ್ಲಿ ಸಂಗಾತಿ ಹೇಳಿಕೊಳ್ಳುವಾಗ ಕೇಳುವವರಿಗೆ ಆತಂಕ ಉಂಟಾಗುತ್ತದೆ. ಇಲ್ಲಿ, ಸಂಗಾತಿ ಕೈಬಿಡುತ್ತಾರೆ ಎನ್ನುವ ಭಯಕ್ಕಿಂತ ಅವರು ಇತರ ಸಾಧ್ಯತೆ ಕುರಿತು ಯೋಚಿಸಿ, ಅಂತಿಮವಾಗಿ ನನ್ನೊಡನೆಯೇ ಇರಲು ಬಯಸಿದ್ದಾರೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕೆಂದು ಸೂಚಿಸಿದ್ದೆ. ಇನ್ನು, ಕಾಮಕ್ರಿಯೆಯ ಹಿಂದಿರುವ ಉದ್ದೇಶಗಳ ಪಟ್ಟಿ ಇನ್ನೂ ಇದೆ. ಸನ್ನಿವೇಶ: ಮನೋಜ– ಮಾಯಾ ಕತ್ತಲಲ್ಲಿ ಕೂಟ ನಡೆಸುತ್ತಿದ್ದಾರೆ. ಪರಸ್ಪರರನ್ನು ನೋಡುತ್ತಿಲ್ಲ. ಎರಡು ಶರೀರಗಳು ಸಿಕ್ಕ ಸ್ಪರ್ಶವನ್ನು ಹೀರಿಕೊಳ್ಳುತ್ತಿರುವಾಗ ಮನಸ್ಸುಗಳು ಎಲ್ಲೆಲ್ಲೋ ಅಲೆಯುತ್ತಿವೆ. ಮನೋಜನು ಮಾಯಾಳನ್ನು ಹಣಿಯುತ್ತಿದ್ದಾನೋ ಎನ್ನುವಂಥ ವ್ಯಗ್ರತೆಯಿಂದ ಕೂಡಿದ್ದರೆ, ಕೂಟದ ನಂತರ ಮನೋಜ ತನ್ನಿಂದ ದೂರವಾಗುವುದನ್ನು ನೆನೆಸಿಕೊಳ್ಳುತ್ತ ಇದೆಂದಿಗೂ ಮುಗಿಯಬಾರದು ಎನ್ನುವಂತೆ ಮಾಯಾ ಅವನ ನಿತಂಬವನ್ನು ಗಟ್ಟಿಯಾಗಿ ಹಿಡಿದಿದ್ದಾಳೆ... ಇಲ್ಲೇನು ನಡೆಯುತ್ತಿದೆ?

**10)** ಕಲ್ಪನಾ ವಿಲಾಸ: ಕೆಲವರು ಸಂಗಾತಿಯೊಡನೆ ಕಾಮಕ್ರಿಯೆ ಯಾಕೆ ನಡೆಸುತ್ತಾರೆ ಗೊತ್ತೆ? ಮೂರನೆಯವರ ಜೊತೆಗೆ ನಡೆಸಲಾಗುವುದಿಲ್ಲ ಎಂಬ ಕಾರಣಕ್ಕೆ! ಉದಾಹರಣೆಗೆ, ನನ್ನಲ್ಲಿ ಬಂದ ನವದಂಪತಿಯಲ್ಲಿ ಕೂಟವು ಸಾಕಷ್ಟಿದ್ದರೂ ಅನ್ಯೋನ್ಯತೆಯ ಲವಲೇಶವೂ ಇರಲಿಲ್ಲ. ಕತ್ತಲೆಯಲ್ಲಿ ನಡೆಸುತ್ತಾರೆ, ಹಾಗೂ ಕಣ್ಣಲ್ಲಿ ಕಣ್ಣಿಟ್ಟು ನೋಡುವುದು ಕಡಿಮೆ ಎಂದು ಕಂಡುಬಂದಾಗ ವಿಚಾರಿಸಿದರೆ ಗೊತ್ತಾಗಿದ್ದೇನು? ಇಬ್ಬರೂ ಮುಂಚೆ ಬೇರೆಯವರನ್ನು ಪ್ರೀತಿಸುತ್ತಿದ್ದು, ರೋಚಕ ಕಾಮಸಂಬಂಧವನ್ನು ಹೊಂದಿದ್ದರು. ಕಾರಣಾಂತರದಿಂದ ಸುಖಾಂತವಾಗಲಿಲ್ಲ. ಈ ಮದುವೆ ಅವರಿಗೆ ವ್ಯಾವಹಾರಿಕವಾಗಿ ಬೇಕಾಗಿತ್ತು. ಇನ್ನು, ಕತ್ತಲೆ ಯಾಕೆ? ಸಂಗಾತಿಯ ಮುಖ ಕಾಣದಿದ್ದರೆ ಮನದಲ್ಲಿರುವವರನ್ನು ಸಾಕಾರಗೊಳಿಸಿಕೊಳ್ಳಲು ಅನುಕೂಲ. ಇನ್ನೊಬ್ಬನಂತೂ ಹೆಂಡತಿಯನ್ನು ಭೋಗಿಸುವಾಗ ಆಕೆಯ ತಲೆದಿಂಬಿನ ಬದಿಯಲ್ಲಿರಿಸಿದ ಲ್ಯಾಪ್‌ಟಾಪ್‌ನಲ್ಲಿ ನೀಲಿಚಿತ್ರ ಓಡುತ್ತಿರುತ್ತದೆ! ಅಂದರೆ, ಮನದಲ್ಲಿರುವ ಇನ್ನೊಬ್ಬರೊಡನೆ ನಲಿಯುವುದಕ್ಕೆ ಸಂಗಾತಿಯ ಶರೀರವನ್ನು ಬಳಸಿಕೊಳ್ಳುವುದಿದೆ ಎಂದಾಯಿತು. ಈ ಪ್ರಕ್ರಿಯೆ ಸರಳವಲ್ಲ, ಹಾಗೆಯೇ ಅಸಹಜವೂ ಅಲ್ಲ. ಯಾಕೆ? ಯಾರಿಗೇ ಆಗಲಿ, ಏಕಸಂಗಾತಿಯಿಂದ ಎಲ್ಲವನ್ನೂ ಪೂರೈಸಿಕೊಳ್ಳಲು ಆಗುವುದಿಲ್ಲ. ಯಾಕೆಂದರೆ ಯಾರೂ ಸರ್ವಸಂಪನ್ನರಲ್ಲ!

**11)** ಬಾಲ್ಯದ ನೋವಿಗೆ ಶಮನ: ಬಾಲ್ಯದಲ್ಲಿ ಹೆತ್ತವರಿಂದ ಸಿಕ್ಕ ನಂಟಿನ ನಮೂನೆಯನ್ನು ಅನುಸರಿಸಿ ಎಳೆಯರು 'ನನಗೆ ಪ್ರೀತಿಗೆ ಅರ್ಹತೆಯಿಲ್ಲ' 'ಬದುಕು ಕ್ರೂರ' 'ಯಾರನ್ನೂ ನಂಬಬಾರದು' ಮುಂತಾದ ಕಥನಗಳನ್ನು (**narrative**) ಕಟ್ಟಿಕೊಳ್ಳುತ್ತಾರೆ, ಹಾಗೂ ಪ್ರಬುದ್ಧರಾದಾಗ ಕಥನಕ್ಕೊಪ್ಪುವ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಎನ್ನುವುದಕ್ಕೆ ನಿಸ್ಸಂದೇಹ ಆಧಾರಗಳಿವೆ. ಬಾಲ್ಯದಲ್ಲಿ ಪ್ರೀತಿ ಹಾಗೂ ಸ್ವಾತಂತ್ರ್ಯವನ್ನು ಯಥೇಷ್ಟ ಉಂಡವರು ಸೂಕ್ತ ಸಂಗಾತಿಯನ್ನು ಆರಿಸಿಕೊಳ್ಳುವ ಭಾವನಾತ್ಮಕ ಕೌಶಲ್ಯ ಹೊಂದಿರುತ್ತಾರೆ. ಬದಲಾಗಿ ದುರ್ಲಕ್ಷ್ಯ, ಅವಹೇಳನ ಅಥವಾ ಗಾಸಿಕರ ವಾತಾವರಣದಲ್ಲಿ ಬೆಳೆದವರು ಒಂಟಿತನ, ನೋವು,ದುಃಖ, ಆತಂಕ ಅನುಭವಿಸುತ್ತಾರೆ. ಈ ಭಾವಗಳನ್ನು ಅವರು ಕಾಮಕೂಟದಲ್ಲೂ ಪ್ರಕಟಗೊಳಿಸುತ್ತಾರೆ. ಉದಾಹರಣೆಗೆ, ಆತಂಕಕ್ಕೆ ಪಕ್ಕಾದವರು (ಮೇಲೆ ಮಾಯಾ ನಡೆದುಕೊಂಡಂತೆ) ಸಂಗಾತಿಯನ್ನು ಬಿಡದಂತೆ ಅಂಟಿಕೊಳ್ಳುತ್ತ, ಬೇರ್ಪಡಲಾಗದೆ ಹಟ ಮಾಡಬಹುದು. ಬಾಲ್ಯದಲ್ಲಿ ಸೃಜನಶೀಲತೆಯನ್ನು ಕಳೆದುಕೊಂಡು ಏಕತಾನೀಯತೆಗೆ ಒಗ್ಗಿದವರಿಗೆ ಕೂಟದ ವೈವಿಧ್ಯಗಳು ಇಷ್ಟವಾಗಲಿಕ್ಕಿಲ್ಲ. ಬಾಲ್ಯದಲ್ಲಿ ಪ್ರೀತಿಯ ಬದಲು ಅವಮಾನಕ್ಕೆ ಒಳಗಾದವರು ದಾಂಪತ್ಯದಲ್ಲಿ ಭಾವಬಾಂಧವ್ಯ ಕಟ್ಟಿಕೊಳ್ಳಲಾಗದೆ ಕೇವಲ ಕ್ರಿಯೆಗೆ ಒತ್ತುಕೊಡಬಹುದು. ಇವರು ಕಾಮಕ್ರಿಯೆಗೆ ಹೊರತಾದ ಸಂದರ್ಭಗಳಲ್ಲಿ ಸಂಗಾತಿಯನ್ನು ಸಮೀಪಿಸುವುದರಲ್ಲಿ ಅರ್ಥ ಕಾಣಲಾರರು. ಇನ್ನು, ನಿಕಟ ಸಂಬಂಧವೆಂದರೆ ಇನ್ನಷ್ಟು ನೋವು ಎನ್ನುವ ಕಥನ ಹೊಂದಿರುವವರು ಕಾಮಕೂಟವನ್ನು ಬಹುಶಃ ಬಯಸಲಾರರು.

ಬಾಲ್ಯದಲ್ಲಿ ತೀರಾ ನೋವುಂಡು ಹಣ್ಣಾದವರು ಕೂಟದಲ್ಲಿ ಸುರಕ್ಷಿತತೆ, ಶಾಂತಿ, ನೆಮ್ಮದಿ ಬಯಸುತ್ತಾರೆ. ಹೆಂಗಸರಾದರೆ ರಭಸದ ಕಾಮಕ್ರಿಯೆ ಹಿಡಿಸಲಾರದು; ಗಂಡಸರಾದರೆ ಸಂಗಾತಿಯನ್ನು 'ತೃಪ್ತಿಪಡಿಸುವ ಹೊಣೆ'ಯಿಂದ ದೂರವುಳಿಯಲು ನೋಡುತ್ತಾರೆ. ಈ ವರ್ತನೆಯನ್ನು ಸಂಗಾತಿಯು ಕಾಮನಿರಾಸಕ್ತಿಯೆಂದು ಗ್ರಹಿಸಿದರೆ ಅಚ್ಚರಿಯಿಲ್ಲ. ಇಲ್ಲೊಂದು ಆಶಾದಾಯಕ ಸುದ್ದಿ; ಅರ್ಥಮಾಡಿಕೊಳ್ಳುವ ಸಂಗಾತಿಯ ಜೊತೆಗೆ ಸುದೀರ್ಘಕಾಲ ಕಾಮಸಾಂಗತ್ಯದಲ್ಲಿ ಇದ್ದರೆ ಬಾಲ್ಯದ ಗಾಯಗಳು ಕ್ರಮೇಣ ವಾಸಿಯಾಗಿ ಚೈತನ್ಯ ಮರಳುತ್ತದೆ! ಇದಕ್ಕೆ ಕಾರಣವೆಂದರೆ, ಒಬ್ಬರಿಗೊಬ್ಬರು ನಿರಂತರ ಸ್ಪರ್ಶದಲ್ಲಿರುವಾಗ ಚೈತನ್ಯವು ಮೈಯಿಂದ ಮೈಗೆ ಹರಿಯುತ್ತ ಮೈಯೊಳಗೆ ಮಲೆತುನಿಂತ ನೋವನ್ನೂ ಜಡತ್ವವನ್ನೂ ಓಡಿಸುತ್ತದೆ — ಏಟು ತಿಂದುಬಂದ ಮಗುವನ್ನು ಮುದ್ದಿಸುತ್ತ ಮೈ ನೇವರಿಸಿದಾಗ ಆಗುವಂತೆ. ನೆನಪಿಡುವ ವಿಷಯವೆಂದರೆ, ಬಾಲ್ಯದಲ್ಲಿ ನೋವುಂಡವರು ಹಾಸಿಗೆಯಲ್ಲಿ ಹೆಚ್ಚಿನಂಶ ಬಯಸುವುದು ಭದ್ರತೆ, ಸುರಕ್ಷಿತತೆಯೇ ವಿನಾ ಜುಮ್ಮೆನಿಸುವ ತೃಪ್ತಿಯಲ್ಲ. ಹೊಸ ಭಂಗಿಗಳು ಇವರಿಗೆ ಇಷ್ಟವಾಗಲಿಕ್ಕಿಲ್ಲ. ಕೂಟದಲ್ಲಿ ತನ್ನೊಳಗಿನ ಪ್ರಕ್ರಿಯೆಯಲ್ಲಿ ಮುಳುಗುತ್ತ ಅಂತರ್ಮುಖಿಯಾಗುವ ಹೆಣ್ಣು ತನ್ನನ್ನು ಇಷ್ಟಪಡುತ್ತಿಲ್ಲವೆಂದು ಅಸಮಾಧಾನಿಸುವ, ಹಾಗೂ ಆಕೆಯನ್ನು ಹೊರತಂದು ಭಾವಪ್ರಾಪ್ತಿ (**orgasm**) 'ಒದಗಿಸಿ' ಶಹಬ್ಬಾಸ್ ಎನಿಸಿಕೊಳ್ಳಲು ವೃಥಾ ಹೆಣಗುವ ಗಂಡಸರಿದ್ದಾರೆ. ಹಾಗೆಯೇ, ಭಾವಪ್ರಾಪ್ತಿ ಆಗದಿದ್ದರೂ ಕೂಟದಲ್ಲಿ ಖುಷಿಯಿಂದ ಒಳಗೊಳ್ಳುವ ಹೆಂಗಸರಿದ್ದಾರೆ.

**12)** ಬಾಲ್ಯದ ಮರುಬದುಕು: ಬಾಲ್ಯದಲ್ಲಿ ಹೆತ್ತರೊಡನೆ ಇಟ್ಟುಕೊಂಡ ಸಂಬಂಧಗಳು ಪ್ರಬುದ್ಧ ಲೈಂಗಿಕ ಬದುಕಿನಲ್ಲಿ ಸದ್ದಿಲ್ಲದೆ ಇಣುಕುತ್ತ ಮಹತ್ತರ ಪ್ರಭಾವ ಬೀರುತ್ತವೆ. ಉದಾ: ಬಾಲ್ಯದಲ್ಲಿ ತಂದೆಯಿಂದ ದೂರೀಕರಿಸಲ್ಪಟ್ಟವಳು ತಾರುಣ್ಯದಲ್ಲಿ ತನಗಿಂತ ಹಿರಿಯನಾದ ಗಂಭೀರ ವ್ಯಕ್ತಿಯನ್ನು ಮೆಚ್ಚಬಹುದು. ಬಾಲ್ಯದಲ್ಲಿ ಸಿಗದಿದ್ದ ವಾತ್ಸಲ್ಯವನ್ನು ಪಡೆಯಲು ಒಳಾಸೆ ಇಲ್ಲಿದೆ (ತರುಣಿಯರು ವಿವಾಹಿತ ಮಧ್ಯವಯಸ್ಕರೊಡನೆ ಸಂಬಂಧವಿಟ್ಟುಕೊಳ್ಳುವುದರ ಹಿನ್ನೆಲೆ ಇದೇ). ಹಾಗೆಯೇ ತಾಯಿಯ ಪ್ರೀತಿಯಿಂದ ವಂಚಿತನಾಗಿ ಅವಮಾನ ಅನುಭವಿಸಿದ ಮಗನು ಒಂದೋ ಹೆಂಡತಿಗೆ ಶರಣಾಗಿ ಅಮ್ಮಾವ್ರ ಗಂಡ ಎನ್ನಿಸಿಕೊಳ್ಳಬಹುದು; ಅಥವಾ ಹೆಂಡತಿಯನ್ನು ತುಚ್ಛೀಕರಿಸಿ ದೂರವಿಡಬಹುದು. ಹೆಣ್ಣನ್ನು ಭೋಗವಸ್ತು ಎಂದು ಅಗೌರವಿಸುವ ಮನೋಭಾವ ಇಲ್ಲಿಂದಲೇ ಹುಟ್ಟುತ್ತದೆ. ಬಾಲ್ಯದಲ್ಲಿ ಹೆಣ್ಣೆಂದು ಕಡೆಗಣಿಸಲ್ಪಟ್ಟವಳು ಮದುವೆಯಾದ ಕೂಡಲೇ (ಅನ್ಯೋನ್ಯತೆಗೆ ಕಾಯದೆ) ಮಗು ಬೇಕೆಂದು ಹಕ್ಕೊತ್ತಾಯ ತರುವುದು ಇದೇ ಕಾರಣದಿಂದ. ಅನೇಕರು ತಂದೆ/ತಾಯಿಯನ್ನು ಹೋಲುವ ಸಂಗಾತಿಯನ್ನು ಆರಿಸಿಕೊಳ್ಳುತ್ತಾರೆ. ಉದಾಹರಣೆಗೆ, ಗುಮ್ಮನಗುಸಕ ಅಪ್ಪನಿರುವವಳು ಅಂಥದ್ದೇ ಸ್ವಭಾವದ ಗಂಡನನ್ನು ಆಯ್ಕೆಮಾಡಿಕೊಳ್ಳಬಹುದು. ಯಾಕೆ? ಸರಿಹೊಂದದಿದ್ದರೂ ಪರವಾಗಿಲ್ಲ, ಸ್ವಭಾವ ಚಿರಪರಿಚಿತ ಆದುದರಿಂದ ನಿರ್ವಹಿಸಬಹುದು! ಬಾಲ್ಯದಲ್ಲಿ ಕೆಟ್ಟ ಅಪ್ಪನಿಗೆ ಬುದ್ಧಿಹೇಳಲು ಸಾಧ್ಯವಾಗದ ಹುಡುಗಿ ದೊಡ್ಡವಳಾದ ನಂತರ ಗಂಡನನ್ನು ತಿದ್ದುತ್ತ ಬಾಲ್ಯದ ಅಪೂರ್ಣ ವ್ಯವಹಾರವನ್ನು ಪೂರ್ತಿಗೊಳಿಸುತ್ತಾಳೆ.

**ಪ್ರಯೋಗ 29:** ಸಂಗಾತಿಯೊಡನೆ ಕುಳಿತುಕೊಂಡು ನಿಮ್ಮ ಕಾಮಕೂಟದಲ್ಲಿ ಹೊಸ ಭಂಗಿಯೊಂದನ್ನು ಜಾರಿಗೊಳಿಸುವುದರ ಬಗೆಗೆ ಮಾತಾಡಿ. ಆಗ ಇಬ್ಬರಲ್ಲೂ ಸ್ಫುರಿಸುವ ಭಾವನೆಗಳನ್ನು ಗಮನಿಸಿ. ಕುತೂಹಲ, ಉತ್ಸಾಹ ಎನ್ನಿಸದೆ ಪ್ರತಿರೋಧ ಅಥವಾ ಜಡತ್ವ ಅನಿಸುತ್ತಿದ್ದರೆ ಅದಕ್ಕೂನೀವು ಸದ್ಯದ ಭಂಗಿಯನ್ನು ಅನುಸರಿಸುವಾಗ ಸಿಗುವ ಮಾನಸಿಕ ನೆಮ್ಮದಿಗೂ ಹೋಲಿಸಿಕೊಳ್ಳಿ. ಪ್ರತಿರೋಧವನ್ನು ಮೀರಬಹುದೇ ಎಂದು ಆತ್ಮವೀಕ್ಷಣೆ ಮಾಡಿಕೊಳ್ಳಿ.

**ವಾರದ ಪ್ರಶ್ನೆಗಳು:** ಕಾಮಕೂಟದ ನಂತರ ಸಿಗುವ ತೃಪ್ತಿಯಲ್ಲಿ ಶಾರೀರಿಕ ತೃಪ್ತಿಯನ್ನು ಸಾಂಗತ್ಯದಿಂದ ಬರುವ ಸುಖದಿಂದ ಬೇರ್ಪಡಿಸಿ, ಈ ಸಾಂಗತ್ಯಕ್ಕೂ ಬಾಲ್ಯದಲ್ಲಿ ಕಳೆದುಕೊಂಡ ನಂಟುತನಕ್ಕೂ ಸಂಬಂಧವಿದೆಯೇ ಎಂದು ಯೋಚಿಸಿ. ಬೇಕಾದರೆ ನನ್ನೊಡನೆ ಹಂಚಿಕೊಳ್ಳಿ.